# ಸ್ವಾಮಿ ಬ್ರಹ್ಮಾನಂದರ ನೆನಪುಗಳು-೧

ಸ್ವಾಮಿ ನಿರ್ವಾಣಾನಂದ

ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರಾಗಿದ್ದ ಸ್ವಾಮಿ ಬ್ರಹ್ಮಾನಂದರು ಶ್ರೀರಾಮಕೃಷ್ಣರ ವಿಶೇಷ ಕೃಪೆಗೆ ಪಾತ್ರರಾದವರು. ಅವರಿಂದ ಪುತ್ರವಾತ್ಸಲ್ಯವನ್ನು ಪಡೆದವರು. ಆಧ್ಯಾತ್ಮಿಕವಾಗಿಯೂ ಶ್ರೀರಾಮಕೃಷ್ಣರ ವಾರಸುದಾರರಾಗಿದ್ದರು. ಇವರ ಜೀವನದ ಘಟನೆಗಳ ನೆನಪುಗಳನ್ನು ಅವರ ಶಿಷ್ಯರಾದ ಸ್ವಾಮಿ ನಿರ್ವಾಣಾನಂದಜಿ ವಿವರಿಸಿದ್ದಾರೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ.ಇ.ವಸಂತ ಕುಮಾರ್ ಅವರು ಕನ್ನಡ ಅನುವಾದವನ್ನು ಮಾಡಿಕೊಟ್ಟಿದ್ದಾರೆ.

ಶ್ರೀ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರನ್ನು ಎಲ್ಲರೂ ಕರೆಯುತ್ತಿದ್ದುದು ಹೀಗೆ) ಅವರನ್ನು ನಾನು ಮೊದಲ ಬಾರಿ ಕಾಶಿಯ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಭೇಟಿಯಾದೆ. ಅದು ರೋಗಿಗಳ ಮತ್ತು ದಿಕ್ಕಿಲ್ಲದವರ ಸೇವೆಗಾಗಿ ಮೀಸಲಿರುವ ಆಸ್ಪತ್ರೆ. ರೋಗಿಗಳು ಭಗವಂತನ ರೂಪವೆಂದು ತಿಳಿದು ಸಂನ್ಯಾಸಿಗಳು ಮತ್ತು ಬ್ರಹ್ಮಚಾರಿಗಳು ಶ್ರದ್ಧೆಯಿಂದ ಅವರ ಸೇವೆ ಮಾಡುವರು. ರಾಮಕೃಷ್ಣ ಸಂಘದ ಈ ಉದಾತ್ತ ಆದರ್ಶದಿಂದ ಸ್ಫೂರ್ತಿಗೊಂಡು ಸಂನ್ಯಾಸಿಯಾಗುವ ಉತ್ಕಟೇಚ್ಛೆಯಿಂದ ನಾನು ಈ ಆಶ್ರಮವನ್ನು ಸೇರಿದೆ. ನಾನು ಮಹಾರಾಜರ ಮೊದಲ ಭೇಟಿಗೆ ಪೂರ್ವಭಾವಿಯಾಗಿ ಅವರೊಡನೆ ಪತ್ರ ವ್ಯವಹಾರ ನಡೆಸಿದ್ದೆ ಮತ್ತು ಅವರ ಬಗ್ಗೆ 'ರಾಮಕೃಷ್ಣ ವಚನವೇದ'ದಲ್ಲಿಯೂ ಓದಿದ್ದೆ.



ಸೇವಾಶ್ರಮದ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆಯೂ ನನ್ನ ಮನಸ್ಸಿನಲ್ಲಿ, "ನಾನು ಯಾವಾಗ ಮಹಾರಾಜರನ್ನು ಹೋಗಿ ನೋಡಿಯೇನು?" ಎಂಬ ಯೋಚನೆ ಸುಳಿಯುತ್ತಿತ್ತು. ಅವರ ಕಣ್ಣುಗಳು ಯಾವಾಗಲೂ ಅವರಲ್ಲಿದ್ದ ಸಹಾನುಭೂತಿ ಮತ್ತು ಅಲೌಕಿಕತೆಯನ್ನು ಹೊರಸೂಸುತ್ತಿದ್ದವು. ಅವರ ಕಾಂತಿಯುತ ನಗುಮುಖ ಮತ್ತು ಮಗುವಿನಂತಹ ಸರಳತೆ ನನ್ನನ್ನು ಅವರೆಡೆಗೆ ಹೆಚ್ಚು ಹೆಚ್ಚು ಆಕರ್ಷಿಸಿದವು.

ನಿತ್ಯಕೆಲಸಗಳೆಲ್ಲ ಮುಗಿದಮೇಲೆ, ಅವಕಾಶವಾದಾಗಲೆಲ್ಲ, ಮಹಾರಾಜರ ಹತ್ತಿರವಿದ್ದು, ಅವರಿಗೆ ಸಂಬಂಧಪಟ್ಟ ಸಣ್ಣಪುಟ್ಟ ಸೇವೆಗಾಗಿ ಸಿದ್ಧವಾಗಿರಲು ಹಾತೊರೆಯುತ್ತಿದ್ದೆ. ಅಂತಹ ಸೇವೆಯ ಮೂಲಕ ಕೆಲವು ವೇಳೆ ನನ್ನೊಳಗೆ ಆನಂದದ ಭಾವ ಚಿಮ್ಮುವುದನ್ನು ಅನುಭವಿಸಿದೆ. ನನಗೆ ಈ ಮಹಾತ್ಮರ ಸಂಗ ಅವಶ್ಯಕ ಮತ್ತು ಇವರ ಸಹಾಯವಿಲ್ಲದೆ ಬ್ರಹ್ಮವನ್ನಾಗಲಿ, ಆತ್ಮವನ್ನಾಗಲಿ, ದೇವರನ್ನು ಅಥವಾ ಇತರ ಇಂದ್ರಿಯಾತೀತ ವಿಷಯಗಳನ್ನು ಅರ್ಥಮಾಡಿಕೊಳ್ಳುವುದಕ್ಕಾಗಲಿ, ಇಲ್ಲವೇ ಚಿಂತಿಸುವುದಕ್ಕಾಗಲಿ, ಮತ್ತಾವ ಮಾರ್ಗವೂ ಇಲ್ಲವೆಂಬುದು ನನಗೆ ಖಚಿತವಾಗಿ ಮನವರಿಕೆಯಾಗಿತ್ತು.

ಶ್ರೀರಾಮಕೃಷ್ಣರ ನಿರ್ದೇಶನದಂತೆ ಸ್ವಾಮಿ ವಿವೇಕಾನಂದರು ಸಂಘದ ಜವಾಬ್ದಾರಿಯನ್ನು ಮಹಾರಾಜ್ ಅವರಿಗೆ ವಹಿಸಿದ್ದರು. ಸ್ವಾಮಿಜಿ ಕಾಲವಾದ ಬಳಿಕ ತಮಗೆ ಕೊಟ್ಟ ಗುರುತರ ಜವಾಬ್ದಾರಿಯತ್ತ ಮಹಾರಾಜ್ ತಮ್ಮ ಮನಸ್ಸನ್ನು ಸಂಪೂರ್ಣವಾಗಿ ತೊಡಗಿಸಿದರು. ಅವರ ಅಸಾಧಾರಣ ವ್ಯಕ್ತಿತ್ವ ಮತ್ತು ಆಧ್ಯಾತ್ಮಿಕ ಶಕ್ತಿಯಿಂದ ಸಂಘವು ದಿನೇ ದಿನೇ ಪ್ರವರ್ಧಮಾನಕ್ಕೆ ಬಂದಿತು. ಮಹಾರಾಜರ ನಿಲುವಿನಿಂದ ಅವರಲ್ಲಿದ್ದ ನಾಯಕತ್ವದ ಗುಣವನ್ನಾಗಲಿ, ದಕ್ಷತೆಯನ್ನಾಗಲಿ ಯಾರಿಗೂ ಊಹಿಸಲಾಗುತ್ತಿರಲಿಲ್ಲ. ಭರವಸೆ, ಹತಾಶೆಯ ಚಿಹ್ನೆ, ಸ್ಥಾನಮಾನದ ಗರ್ವ ಅಥವಾ ಅಧಿಕಾರದ ದರ್ಪ ಮುಂತಾದ, ಕೆಲಸದ ಕ್ಷೇತ್ರದಿಂದ ಉದ್ಭವಿಸುವ ಆಸಕ್ತಿಗಳ ಪ್ರಭಾವಗಳಿಂದ ಅವರು ಸಂಪೂರ್ಣವಾಗಿ ಮುಕ್ತರಾಗಿದ್ದರು.

ಕಾಡಿನಲ್ಲೇ ಇರಲಿ ಅಥವಾ ಪಟ್ಟಣದಲ್ಲೇ ಇರಲಿ, ಮಹಾರಾಜರು ಸರಳ ಜೀವನವನ್ನೇ ನಡೆಸುತ್ತಿದ್ದರು. ಅವರು ಎಲ್ಲೇ ಇರಲಿ, ಸಂನ್ಯಾಸಿಗಳು ಮತ್ತು ಭಕ್ತರು ಅವರ ಸುತ್ತ ಸೇರುತ್ತಿದ್ದರು. ಅವರನ್ನು ನೋಡಲು ಬಂದವರು ಅವರ ಪಾವಿತ್ರ್ಯತೆಯಿಂದ ಮತ್ತು ಎಲ್ಲರಿಗೂ ಅವರು ತೋರುತ್ತಿದ್ದ ಶುದ್ಧ

ಹಾಗೂ ನಿಸ್ವಾರ್ಥ ಪ್ರೀತಿಯಿಂದ ಹೃದಯ ತುಂಬಿ ಹಿಂದಿರುಗುತ್ತಿದ್ದರು. ಒಂದು ನೋಟ ಅಥವಾ ಸ್ಪರ್ಶ ಅಥವಾ ಕೇವಲ ತಮ್ಮ ಸಾನ್ನಿಧ್ಯದಿಂದ ಮಹಾರಾಜ್ ಇತರರ ಮನಸ್ಸನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಲ್ಲವರಾಗಿದ್ದರು ಮತ್ತು ಜೀವನವನ್ನೇ ಪರಿವರ್ತಿಸಬಲ್ಲವರಾಗಿದ್ದರು. ನಾನು ಮುಂದೆ ವಿವರಿಸಲಿರುವ ಅವರ ಜೀವನದ ಕೆಲವು ಘಟನೆಗಳಿಂದ ಇದು ತಿಳಿಯುವುದು.

ಕೊಲ್ಕತಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು ಮಹಾರಾಜರ ಬಗ್ಗೆ 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಓದಿದ್ದರು. ಅವರ ಮಾಹಾತ್ಮ್ಯವನ್ನು ತಿಳಿದಮೇಲೆ, ಅವರನ್ನು ಸ್ವತಃ ಕಾಣಲು ತೀರ್ಮಾನಿಸಿದರು. ಆಗ ಮಹಾರಾಜರು ಬಲರಾಮ್ ಬೋಸರ ಮನೆಯಲ್ಲಿದ್ದರು. ನಾನು ಅವರ ಸೇವಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಅವರ ದೊಡ್ಡ ಭಕ್ತನಾಗಿದ್ದ ಬಲರಾಮ್ ಬೋಸರ ಮಗ ಒಂದು ಕೊಠಡಿಯನ್ನು ಮಹಾರಾಜರಿಗಾಗಿ ವಿಶೇಷವಾಗಿ ಸಜ್ಜುಗೊಳಿಸಿದ್ದ ಮತ್ತು ಅವರಿಗೆ ಒಂದು ಸುಂದರವಾದ ರೇಷ್ಮೆಯ ಉಡುಪನ್ನು ಉಡುಗೊರೆಯಾಗಿ ಕೊಟ್ಟಿದ್ದ. ಒಂದು ದಿನ, ನಾನಿಲ್ಲದ ಸಮಯದಲ್ಲಿ ಆ ಪ್ರಾಧ್ಯಾಪಕರು, ಮೊದಲೇ ತಿಳಿಸದೆ, ಮಹಾರಾಜರ ಕೊಠಡಿಯನ್ನು ಹಠಾತ್ತನೆ ಪ್ರವೇಶಿಸಿದರು. ಮಹಾರಾಜರು ಶ್ರೀಮಂತರಂತೆ ಹುಕ್ಕಾ ಸೇದುತ್ತಿದ್ದುದನ್ನು ಕಂಡು ಪ್ರೊಫೆಸರ್‌ಗೆ ಆಘಾತವಾಯಿತು. ಇವರು ಶ್ರೀರಾಮಕೃಷ್ಣರ ಮಾನಸಿಕ ಪುತ್ರರಾದ್ದರಿಂದ ಇವರು ಕಡು ನಿಯಮವ್ರತಿಗಳೆಂದು ಅವರು ಊಹಿಸಿದ್ದರು! ಮಹಾರಾಜರಿಗೆ ತಮ್ಮ ಪರಿಚಯವನ್ನು ಮಾಡಿಕೊಳ್ಳದೆಯೇ ಅವರ ಕೊಠಡಿಯಿಂದ ಹೊರಬಿದ್ದರು. ಆದರೆ ಅವರು ಹೊರಟುಹೋಗಲಿಲ್ಲ; ಹೊರಗಡೆ ವರಾಂಡದಲ್ಲಿ ಕುಳಿತುಕೊಂಡು ತಮಗಾದ ಅನುಭವವನ್ನು ಕುರಿತು ಯೋಚಿಸುತ್ತಿದ್ದರು. ನಾನು ಹಿಂತಿರುಗಿದಾಗ ಈ ಪ್ರೊಫೆಸರ್ ವರಾಂಡದಲ್ಲಿ ಒಂದು ಬೆಂಚಿನ ಮೇಲೆ ಕುಳಿತಿದ್ದುದನ್ನು ನೋಡಿದೆ. ಅವರು ಈಗಾಗಲೆ ಮಹಾರಾಜರ ಕೊಠಡಿಗೆ ಹೋಗಿಬಂದಿರುವುದನ್ನು ತಿಳಿಯದ ನಾನು, ಅವರ ಬಳಿ ಹೋಗಿ, "ಮಹಾರಾಜರನ್ನು ನೋಡಲಿಚ್ಛಿಸುವಿರಾ?" ಎಂದು ಕೇಳಿದೆ. ಆತ ಒಂದು ಕ್ಷಣ ಯೋಚಿಸಿ, 'ಹೌದು' ಎಂದರು. ಆದುದರಿಂದ ಅವರನ್ನು ಮತ್ತೆ ಒಳಗೆ ಕಳುಹಿಸಿಕೊಡಲಾಯಿತು. ಮಹಾರಾಜರು ಅವರನ್ನು ಸ್ವಾಗತಿಸಿದರು. ಪ್ರೊಫೆಸರ್ ಸುಮಾರು ಒಂದು ಗಂಟೆಯ ನಂತರ ಮಹಾರಾಜರ ಕೋಣೆಯಿಂದ ಹೊರಬಂದು ನನಗೆ ಹೇಳಿದರು: "ನನ್ನ ಜೀವನದ ಅತ್ಯಂತ ದೊಡ್ಡ ತಪ್ಪನ್ನು ಇನ್ನೇನು ಮಾಡುವುದರಲ್ಲಿದ್ದೆ. ನಾನು ಮಹಾರಾಜರನ್ನು, ನನ್ನದೇ ಆದ ಸಾಂಪ್ರದಾಯಿಕ ದೃಷ್ಟಿಯಿಂದ, ಹೊರಗಿನ ತೋರಿಕೆಯ ಆಧಾರದ ಮೇಲೆ ಅಳೆಯುವವನಿದ್ದೆ... ಈಗ, ನನ್ನ ಜೀವನದ ಅತ್ಯಂತ ಗಾಢವಾದ ಸಮಸ್ಯೆ ಬಗೆಹರಿಯಿತು." ನಂತರ ಅವರು ಮಹಾರಾಜರ ಶಿಷ್ಯರಾದರು.

ದೇವೇನ್ ಬಾಬು ಎಂದು ಕರೆಯಲ್ಪಡುತ್ತಿದ್ದ ದೇವೇಂದ್ರನಾಥ ಬೋಸರು ಶ್ರೀರಾಮಕೃಷ್ಣರ ಭಕ್ತರಾಗಿದ್ದರು ಮತ್ತು ಅವರ ಎಲ್ಲ ಪ್ರತ್ಯಕ್ಷ ಶಿಷ್ಯರೊಂದಿಗೆ, ವಿಶೇಷವಾಗಿ ಸ್ವಾಮಿ ಅಖಂಡಾನಂದರೊಂದಿಗೆ, ಸ್ನೇಹಪರರಾಗಿದ್ದರು. ಗುರುಮಹಾರಾಜರು ಕಾಲವಾದ ನಂತರ ದೇವೇನ್ ಬಾಬು, ಖಾಸಿಂ ಬಝಾರ್‌ನ ಮಹಾರಾಜನ ಆಸ್ತಿ ನಿರ್ವಹಣಾಧಿಕಾರಿಗಳಾದರು ಮತ್ತು ಅನೇಕ ವರ್ಷಗಳ ಕಾಲ ಸಾಧುಗಳನ್ನು ನೋಡಲು ಬರಲಿಲ್ಲ. ಒಂದು ದಿನ ಸ್ವಾಮಿ ಅಖಂಡಾನಂದರು ಅಕಸ್ಮಾತ್ತಾಗಿ ದೇವೇನ್ ಬಾಬು ಅವರನ್ನು ಸಂಧಿಸಿದಾಗ ಅವರನ್ನು ಬೇಲೂರು ಮಠಕ್ಕೆ ಕರೆತಂದರು. ಮಹಾರಾಜರು ಆ ಸಮಯದಲ್ಲಿ ಮಠದಲ್ಲಿದ್ದರು. ಅಷ್ಟು ದೀರ್ಘಕಾಲದ ನಂತರ ಬಂದ ದೇವೇನ್ ಬಾಬುಗಳನ್ನು ಕಂಡು ಮಹಾರಾಜರು ಸ್ವಾಮಿ ಅಖಂಡಾನಂದರಿಗೆ ಹೇಳಿದರು, "ಅರೆ! ಗಂಗಾಧರ್, ಈ ದೇವೇನ್‌ಗೆ ಏನಾಗಿದೆ? ಅವನು ಬಹಳ ಬದಲಾಗಿರುವನು. ಚಲನ-ವಲನ, ನಡೆ-ನುಡಿ, ಎಲ್ಲದರಲ್ಲಿಯೂ—ಅವನ ಮುಖದಲ್ಲಿ ಪ್ರಾಪಂಚಿಕತೆಯ ಛಾಯೆಯಿದೆ ಮತ್ತು ಅವನು ಶೋಕಿಲಾಲನಂತೆ ಬಟ್ಟೆ ಹಾಕಿಕೊಂಡಿರುವನು. ಅವನು ಗುರುಮಹಾರಾಜರನ್ನು ಮತ್ತು ನಮ್ಮೆಲ್ಲರನ್ನೂ ಮರೆತಿರುವನೇ?"

ಸ್ವಾಮಿ ಅಖಂಡಾನಂದರಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಆದರೆ ಮುಂದಿನ ಬಾರಿ ಅವರು ದೇವೇನ್‌ನನ್ನು ನೋಡಿದಾಗ ಮಹಾರಾಜರು ಅವನ ಬಗ್ಗೆ ಏನು ಹೇಳಿದರೆಂಬುದನ್ನು ತಿಳಿಸಿದರು. "ನನಗೇನಾಗಿದೆಯೋ ಗೊತ್ತಿಲ್ಲ. ಆದರೆ ನಾನು ಸಂತೋಷವಾಗಿಲ್ಲ" ಎಂದು ದೇವೇನ್ ಹೇಳಿದ. ಕೆಲವು ದಿನಗಳ ನಂತರ ದೇವೇನ್ ಬಾಬು ಮತ್ತೆ ಮಹಾರಾಜರನ್ನು ನೋಡಲು ಬಂದ. ನಾನು ಮಹಾರಾಜರ ಕೊಠಡಿಯ ಮುಂದೆ ಕುಳಿತಿದ್ದೆ. "ಮಹಾರಾಜ್ ಎಲ್ಲಿರುವರು?" ಎಂದು ಕೇಳಿದ. "ದಯವಿಟ್ಟು ಕುಳಿತುಕೊಳ್ಳಿ, ಮಹಾರಾಜರು ತಮ್ಮ ಕೊಠಡಿಯಲ್ಲಿರುವರು. ನೀವು ಬಂದಿರುವುದನ್ನು ಅವರಿಗೆ ತಿಳಿಸುತ್ತೇನೆ" ಎಂದು ಹೇಳಿದೆ.

ದೇವೇನ್ ಬಾಬುವಿನಲ್ಲಿ ಅಶಾಂತಿಯ ಭಾವ ಸ್ಪಷ್ಟವಾಗಿ ಕಾಣುತ್ತಿತ್ತು. ಅವರಿಗೆ ಒಂದೆಡೆ ಕೂಡಲಾಗುತ್ತಿರಲಿಲ್ಲ. ದೇವೇನ್ ಬಾಬುವನ್ನು ಕಂಡು ಮಹಾರಾಜ್ ನಿಶ್ಶಬ್ದವಾಗಿ ಅವನೆಡೆಗೆ ಹೋದರು. ದೇವೇನ್ ಬಾಬುವಿನ ಎದೆಯ ಮೇಲೆ ಕೈಯಿಟ್ಟು, ಹಲವು ಸಲ ತಟ್ಟಿ, "ಎಲ್ಲವೂ ಸರಿ ಹೋಗುವುದು. ಗುರುಮಹಾರಾಜರನ್ನು ಕುರಿತು ಚಿಂತಿಸು!" ಎಂದು

ಹೇಳಿದರು. ತಕ್ಷಣವೇ ದೇವೇನ್ ಬಾಬುವಿನಲ್ಲಿ ಒಂದು ಸಂಪೂರ್ಣ ಬದಲಾವಣೆ ಉಂಟಾಯಿತು. ಮಹಾರಾಜರಿಗೆ ನಮಸ್ಕರಿಸಿ, "ಮಹಾರಾಜ್, ನನ್ನೆಲ್ಲ ಪ್ರಾಪಂಚಿಕತೆಯೂ ಅಳಿಸಿ ಹೋಯಿತು. ನಾನು ಅದೆಷ್ಟು ಕೆಳಗೆ ಇಳಿದುಹೋಗಿದ್ದೆ! ಆದರೆ ನಿಮ್ಮ ಕೃಪೆ ಮತ್ತು ಆಶೀರ್ವಾದಗಳು ನನ್ನನ್ನು ಉದ್ಧರಿಸಿವೆ. ಈಗಿನ್ನು ನನಗೆ ಯಾವ ದುಃಖ ಮತ್ತು ಕಷ್ಟಗಳೂ ಇಲ್ಲ."

ಮಹಾರಾಜರು ಕಾಲವಾದ ಬಹಳ ಸಮಯದ ನಂತರ ದೇವೇನ್ ಬಾಬು ಅವರ ಬಗ್ಗೆ ಹೀಗೆ ಬರೆದರು: "ಗುರು ಮಹಾರಾಜರ ಆಧ್ಯಾತ್ಮಿಕ ಪುತ್ರರೊಂದಿಗೆ ನಿಕಟಸಂಪರ್ಕವನ್ನು ಹೊಂದಿದ್ದವರು ಮಹಾರಾಜರು. ಅಸೀಮ ಆಧ್ಯಾತ್ಮಿಕ ಶಕ್ತಿಯನ್ನು ಪಡೆದಿದ್ದರೆಂದು ಹೇಳುವರು... ಆದರೆ ಅಷ್ಟೊಂದು ಶಕ್ತಿ ಆ ಮಾನವ ದೇಹದೊಳಗೆ ಹೇಗೆ ಅಡಕವಾಗಿತ್ತೋ ಅದು ಯಾರಿಗೂ ತಿಳಿಯದು... ವಿದ್ಯುತ್ ತಂತಿಯಲ್ಲಿ ಅಡಗಿರುವ ಶಕ್ತಿ, ತಂತಿಯನ್ನು ಮುಟ್ಟಿದಾಗ ಮಾತ್ರವೇ ತಿಳಿದುಬರುವುದು. ಮುಕ್ತಾತ್ಮರ ದೇಹ ಪಂಚಭೂತಗಳಿಂದ ಆಗಿರದೆ ಸಾತ್ವಿಕ ಶಕ್ತಿಯಿಂದ ತಯಾರಾಗಿರುತ್ತದೆ ಎಂದು ಕೇಳಿರುವೆವು. ಆದರೆ ಈ ಸತ್ಯವನ್ನು ಇಂತಹ ದಿವ್ಯ ವ್ಯಕ್ತಿಯ ಸಂಪರ್ಕಕ್ಕೆ ಬಂದಾಗಲೂ ಅರ್ಥಮಾಡಿಕೊಳ್ಳಲು ನನ್ನಿಂದ ಆಗಲಿಲ್ಲ. ಎಂತಹ ದೈವೀ ಪ್ರೀತಿಯಿಂದ ಮಹಾರಾಜರು ನಮ್ಮನ್ನು ಭ್ರಾಂತರನ್ನಾಗಿಸಿದ್ದರು!"

ದೇವೇನ್ ಬಾಬು ಒಮ್ಮೆ ನನಗೆ ಹೇಳಿದರು: "ನಾನು ಮಹಾರಾಜರನ್ನು ನೋಡಲು ಹೋದಾಗಿನ ಸಂದರ್ಭ ನಿಮಗೆ ನೆನಪಿದೆಯೇ? ಅವರು ನನ್ನ ಎದೆಯನ್ನು ತಮ್ಮ ಕೈಯಿಂದ ಮುಟ್ಟಿದಾಗ, ತಕ್ಷಣ ಜುಮ್ಮೆಂದಿತು. ಕೂಡಲೆ ನನ್ನ ಹಿಂದಿನದೆಲ್ಲ ನೆನಪಿಗೆ ಬಂದಿತು. ಮತ್ತೆ ಭಗವಂತನಲ್ಲಿ ಅನುರಾಗ ಮತ್ತು ಅವನ ಸಾಕ್ಷಾತ್ಕಾರಕ್ಕಾಗಿ ವ್ಯಾಕುಲತೆ ನನ್ನ ಮನಸ್ಸನ್ನು ತುಂಬಿತು. ಮತ್ತು ಗುರುಮಹಾರಾಜರ ನೆನಪುಗಳೆಲ್ಲವೂ ಮತ್ತೊಮ್ಮೆ ನನ್ನ ಮನಸ್ಸಿಗೆ ಜೀವಂತವಾಗಿ ಬಂದವು. ತತ್ಪರಿಣಾಮವಾಗಿ ನನ್ನ ಜೀವನದ ಗತಿ ಸಂಪೂರ್ಣವಾಗಿ ಬದಲಾಯಿತು."

**(ಮುಂದುವರಿಯುವುದು)**

## ಸ್ಮರಣಶಕ್ತಿ

ಇದನ್ನು ಆಲೋಚಿಸಿ ನೋಡಿ: ನಿಮ್ಮ ದೋಭಿಗೆ ನೀವು ಬಟ್ಟೆಗಳನ್ನು ಮುದ್ದೆ ಮಾಡಿಕೊಟ್ಟಾಗ, ನಿಮ್ಮ ಬಟ್ಟೆಗಳ ಮೇಲೆ ಅವನು ಯಾವ ಗುರುತನ್ನೂ ಹಾಕುವುದಿಲ್ಲ. ಅನೇಕ ವ್ಯಕ್ತಿಗಳ ಬಟ್ಟೆಗಳು ಅವನಲ್ಲಿಗೆ ಬಂದರೂ ನಿಮ್ಮ ಬಟ್ಟೆಯನ್ನು ಸರಿಯಾಗಿ ಹಿಂದಿರುಗಿಸುತ್ತಾನಲ್ಲವೇ!

ಹಾಲು ಮಾರುವವನು ಅನೇಕ ಗಿರಾಕಿಗಳ ಮನೆಗೆ ಹೋಗುತ್ತಿರುತ್ತಾನೆ. ಆದರೆ ಪ್ರತಿನಿತ್ಯ ನಿಮಗೆ ಬೇಕಾದಷ್ಟೇ ಹಾಲನ್ನು ನೀಡುವುದಲ್ಲದೆ ತಿಂಗಳ ಕೊನೆಯಲ್ಲಿ ನಿಮ್ಮ ಬಿಲ್ಲು ನಿಮಗೇ ಬರುತ್ತದಲ್ಲವೇ?

ಕಾರುಗಳಲ್ಲಿ ಆಸಕ್ತಿಯುಳ್ಳ ನಿಮ್ಮ ಜೊತೆಯ ಮಕ್ಕಳು ಬಹಳ ದೂರದಿಂದಲೇ ಅವುಗಳನ್ನು ಗುರುತಿಸಿ, ತಯಾರಕರ, ದೇಶದ ಹೆಸರುಗಳನ್ನು ಲೀಲಾಜಾಲವಾಗಿ ಹೇಳುತ್ತಿದ್ದರೆ, ನೀವು ತಬ್ಬಿಬ್ಬಾಗಿ ನೋಡುತ್ತಿದ್ದ ಸಂದರ್ಭಗಳು ಅದೆಷ್ಟು?

ಈ ಸ್ಮರಣಶಕ್ತಿಯ ವಿಚಾರವೇ ಅದ್ಭುತ. ಯೋಚಿಸಿ ನೋಡಿ, ಇವರೆಲ್ಲ ಹೇಗೆ ಇದನ್ನು ಸಾಧಿಸಿರುತ್ತಾರೆ? ಮತ್ತೊಂದು ಉದಾಹರಣೆ: ಒಂದು ದೊಡ್ಡ ಹೋಟೆಲಿನ ಬಾಗಿಲಲ್ಲಿ ಒಬ್ಬ ವ್ಯಕ್ತಿ ನಿಂತಿರುತ್ತಾನೆ. ಒಳಗೆ ಬಂದವರ ಟೋಪಿ, ಊರುಗೋಲು ಇತ್ಯಾದಿಗಳನ್ನು ಗೌರವಪೂರ್ವಕವಾಗಿ ಸ್ವೀಕರಿಸಿ, ಹಿಂದಿರುಗುವಾಗ ಸರಿಯಾಗಿ ಅವರಿಗೆ ಒಪ್ಪಿಸುತ್ತಾನೆ! ಅವನಿಗೆ ಇದೆಲ್ಲ ಹೇಗೆ ನೆನಪಿರುತ್ತದೆ? ಒಮ್ಮೆ ಒಬ್ಬ ಮಾರಾಟಗಾರ ತನ್ನ ಮರೆಯುವ ಸಾಮರ್ಥ್ಯದೊಂದಿಗೆ ಇವನನ್ನು ಹೋಲಿಸಿಕೊಂಡು ಕಸಿವಿಸಿಗೊಂಡ. ಮ್ಯಾನೇಜರ್‌ನನ್ನು ಕೇಳಿಯೇ ಬಿಟ್ಟ: "ಅಲ್ಲ! ಇವನಿಗೆ ಇಷ್ಟೊಂದು ಜನರ ಹ್ಯಾಟು, ಕೋಲು, ಬ್ಯಾಗು ಎಲ್ಲ ಹೇಗೆ ನೆನಪಿರುತ್ತದೆ!" "ಅಯ್ಯೋ, ಅದೇನು ಮಹಾ! ಅವನಿಗೆ ಅದೇ ಅಭ್ಯಾಸ!" ಎಂದು ಹೇಳಿ, "ಅದೆಷ್ಟು ವರ್ಷಗಳಿಂದ ಅದನ್ನೇ ಮಾಡುತ್ತಾ ಬಂದಿದ್ದಾನೆ. ಅಭ್ಯಾಸವಾಗಿಬಿಟ್ಟಿದೆ, ಕಷ್ಟವೆನಿಸುವುದೇ ಇಲ್ಲ," ಎಂದ ಮ್ಯಾನೇಜರ್. ಆ ಮಾರಾಟಗಾರ ಹಿಂದಿರುಗುವಾಗ ತನ್ನ ಹ್ಯಾಟನ್ನು ಪಡೆದುಕೊಂಡು, ಆ ವ್ಯಕ್ತಿಯನ್ನು ಕೇಳಿದ, "ಇದು ನನ್ನದೇ ಎಂದು ಹೇಗೆ ಹೇಳುವೆ?" "ನನಗೆ ಗೊತ್ತಿಲ್ಲ ಸರ್!" ಎಂದ ಆ ಸೇವಕ. "ಹಾಗಾದರೆ ನನಗೇಕೆ ಇದನ್ನು ಕೊಡುತ್ತಿರುವೆ?" ಎಂದ ಈತ. "ನೀವೇ ಅಲ್ವಾ , ಅದನ್ನು ನನಗೆ ಕೊಟ್ಟಿದ್ದು" ಎಂದು ಸೇವಕ ಸಂಶಯವಿಲ್ಲದೆ ಹೇಳಿದ. ಆಸಕ್ತಿಯಿಂದ ಕೆಲಸ ಮಾಡುವುದನ್ನು ಕಲಿತರೆ ನೆನಪು ಸಹಜವಾಗಿರುತ್ತದೆ.

## ಸಾವಿಗೆ ತಯಾರಿ

ಪ್ರಸಿದ್ಧ ತತ್ತ್ವಜ್ಞಾನಿ ಸಾಕ್ರಟಿಸ್‌ನನ್ನು ಆ ದೇಶದ ಕ್ರೂರಿ ರಾಜ ಬಂಧಿಸಿದ. ನೇರವಾಗಿ ದಿಟ್ಟತನದಿಂದ ಸತ್ಯವನ್ನು ಹೇಳುತ್ತಿದ್ದುದೇ ಇವನ ಅಪರಾಧವಾಗಿತ್ತು. ವಿಷವನ್ನು ಕೊಟ್ಟು ಸಾಯಿಸಬೇಕೆಂದು ರಾಜ ತೀರ್ಪು ನೀಡಿದ. ಸಾಕ್ರಟಿಸ್ ಯಾವುದೇ ಚಿಂತೆಯನ್ನು ತೋರ್ಪಡಿಸದೆ ಹಸನ್ಮುಖಿಯಾಗಿಯೇ ಇದ್ದ. ಅವನ ಸುತ್ತಲಿದ್ದ ಭಟರು ಹೇಳಿದರು, "ನಿಮಗೆ ಮರಣದಂಡನೆ ವಿಧಿಸಿದ್ದಾರೆ. ಈಗ ಅದಕ್ಕೆ ತಯಾರಾಗಿ." ಸಾಕ್ರಟಿಸ್ ತಲೆದೂಗುತ್ತ ನಗುತ್ತಲೇ ಹೇಳಿದ, "ನಾನು ನನ್ನ ಜೀವನವಿಡೀ ಸಾವಿಗಾಗಿ ತಯಾರಿ ನಡೆಸಿರುವೆ." "ಹೇಗೆ?" ಎಂದು ಅವರು ಕೇಳಿದರು. ಸಾಕ್ರಟಿಸ್ ಹೇಳಿದ, "ನಾನು ಗೋಪ್ಯವಾಗಿಯೇ ಆಗಲಿ, ನೇರವಾಗಿಯೇ ಆಗಲಿ ಯಾವುದೇ ಸಂದರ್ಭದಲ್ಲಿ ಯಾರಿಗೂ ತೊಂದರೆ ನೀಡಿಲ್ಲ, ಮೋಸ ಮಾಡಿಲ್ಲ!"